ಅಮ್ಮನ ಅಸಹನೆ 'ಸಾಕು ಸಾಕು... ಅದೇನು ಮಹಾ... ಇಷ್ಟು ಹುಣಿಸೇ ಹುಳಿ ಹಾಕಿ ತಿಕ್ಕಿದ್ರೆ ಎಲ್ಲ ತಾನಾಗೇ ಹೊಳೆಯುತ್ತೆ. ಯಾವುದೂ ಅತಿ ಮಾಡಬಾರದು' ಅಂದುಬಿಟ್ಟಳು. ಯಾಕೋ ಶೇಷಜ್ಜಿಗೂ ಸಾಕಾಗಿತ್ತೇನೋ... ಧಡ ಧಡ ಎದ್ದು ಕೋಣೆಗೆ ಹೋಗಿಬಿಟ್ಟಳು. ಮಧ್ಯಾಹ್ನ ಊಟಕ್ಕೆ ಕರೆದರೂ ಬರಲಿಲ್ಲ. ಸಂಜೆ ನಾನು ಅವಳನ್ನು ರಮಿಸಲು ಹೋಗಿದ್ದೆ. ಆಗ ಅವಳು 'ನೋಡೆ... ಸಾಕಾಯ್ತು ಕಣೆ... ಈ ಎರಡು ಸರಗಳ ಜಗಳ. ಒಂದೂ ಸುಮ್ಮನಾಗಲ್ಲ ಅನ್ನುತ್ತವೆ... ರುದ್ರಾಕ್ಷಿನ ಬಂಗಾರದಲ್ಲಿ ಕಟ್ಟಿದರೆ ಆ ಶಿವನಿಗೇ ಅವಮಾನ ಅಲ್ವೇ? ಯಾಕೆ ತಿಳೀತಿಲ್ಲ ಅದಕ್ಕೆ! ಈ ಬಂಗಾರಕ್ಕೋ ತನ್ನ ಹತ್ತಿರ ಇರೋ ಶೇಷಮ್ಮನ್ನೇ ನೋಡೋಕೆ ಆಗ್ತಿಲ್ಲ... ಇನ್ನು ರುದ್ರಾಕ್ಷಿ ಮೇಲೆ ಕಣ್ಣು ಯಾಕೆ?... ಅರ್ಥ ಆಗಲ್ಲ ಕಣೆ' ಅಂದಿದ್ದಳು. ರಾತ್ರಿ ಊಟಕ್ಕೆಂದು ಅಜ್ಜಿ ಚಪಾತಿ ಲಟ್ಟಿಸುತ್ತಿದ್ದಾಗ ಅಮ್ಮ ಕಕ್ಕುಲಾತಿಗೆ ಎಂಬಂತೆ 'ಮಧ್ಯಾಹ್ನ ಊಟನೇ ಮಾಡಲಿಲ್ಲ' ಅಂದಳು. ಎಲ್ಲಿತ್ತೋ ಶೇಷಜ್ಜಿಯ ಸಿಟ್ಟು, 'ನನ್ನ ಊಟ ಕಟ್ಟಿಕೊಂಡು ನಿಮಗೇನು. ನಿಮಗೆ ಮಾಡಿ ಹಾಕೋಕೆ ಮತ್ತು ಅಂದದ್ದನ್ನೆಲ್ಲ ಅನ್ನಿಸಿಕೊಳ್ಳೋಕೆ ಒಂದು ಆಳಿದ್ರೆ ಸಾಕಲ್ಲ' ಅಂದುಬಿಟ್ಟಳು. ಎಂದೂ ಮಾತನಾಡದ ಅಜ್ಜಿ ಮಾತಾಡಿದ್ದನ್ನು ಕಂಡು ನನಗೆ ಮತ್ತು ಅತ್ತಿಗೆಗೆ ಸೋಜಿಗ. ನಾವಿಬ್ಬರೂ ದಂಗಾಗಿ ಬಿಟ್ಟೆವು. ಆದರೆ ಅಮ್ಮ ಸುಮ್ಮನಿರಬೇಕಲ್ಲ! ಅಜ್ಜಿ ಎಲ್ಲರಿಗೂ ಕೊಟ್ಟು ಕೊನೆಯಲ್ಲಿ ತಾನೂ ಎರಡು ಚಪಾತಿ, ಪಲ್ಯ ಮತ್ತು ನೀರು ಇಟ್ಟುಕೊಂಡು ತಿನ್ನಲೆಂದು ಕುಳಿತಳು. ಆಗ ಅಮ್ಮ ಜೋರಾಗಿ, 'ಬೀದೀಲಿ ಬಿದ್ದವರನ್ನೆಲ್ಲ ಕರಕೊಂಡು ಬಂದು ಮನೇಲಿ ಸಾಕಿದ್ರೆ ನಮಗೆ ಹೀಗೇ ಆಗೋದು. ಎಲ್ಲ ನನ್ನ ಹಣೆ ಬರಹ. ಇವರು ಚೆನ್ನಾಗಿದ್ದಿದ್ರೇ ನನಗೇಕೆ ಈ ಕಷ್ಟ. ಅದರಿಂದಾನೇ ಎಂತೆಂತಹ ನಾಯಿಗಳಿಗೂ ಬಾಯಿ ಬಂದುಬಿಡುತ್ತೆ' ಅಂದುಬಿಟ್ಟಳು. ಶೇಷಜ್ಜಿ ತಟ್ಟೆ ಮುಂದಿನಿಂದ ಎದ್ದು ನೇರ ಕೋಣೆಗೆ ಹೋಗಿಬಿಟ್ಟಳು. ನಾಲ್ಕು ದಿನ ಮೌನ ವ್ರತ. ಅತ್ತಿಗೆ ಅಂತು ಅವಳನ್ನು ರಮಿಸಿ ರಮಿಸಿ ಸಾಕಾಗಿಬಿಟ್ಟಳು. ನಾನೂ ಅಮ್ಮನ ಜೊತೆ ಜಗಳಾ ತೆಗೆದಿದ್ದೆ 'ನಿನಗೆ ಅವರನ್ನು ಬೈಯದಿದ್ದರೆ ಊಟನೇ ಸೇರಲ್ವ' ಅಂತ. ಅಮ್ಮನಿಗಂತೂ ಸಹನೆಯೇ ಇರಲಿಲ್ಲವಲ್ಲ! ಅತ್ತಿಗೇನ ತರಾಟೆಗೆ ತಗೊಂಡರು 'ನಿನ್ನಿಂದಲೇ ಇದೆಲ್ಲ. ಯಾವಾ ಗಳಿಗೇಲಿ ನೀನು, ನಿನ್ನ ಶೇಷಜ್ಜಿ ಕಾಲಿಟ್ಟಿರೋ ಮನೆ ಅನ್ನೋದು ನರಕ ಆಗಿಬಿಟ್ಟಿತು'

ಅತ್ತಿಗೆಯ ಸಹನೆಯೂ ಮೀರಿತ್ತಲ್ಲವೇ... 'ಅವಳಿರೋದರಿಂದ ತಾನೇ ನೀವು ಹೀಗೆ ಕಾಲು ಚಾಚಿ ಕುಳಿತುಕೊಂಡಿರೋದು. ಅವಳಿಗೇನು ಊಟಕ್ಕೆ ಗತಿ ಇಲ್ಲ ಅಂತ ಬಂದಿದ್ದಾಳೆಯೇ. ಅವಳು ಕೆಲಸ ಮಾಡದೆಯೇ ಅವಳನ್ನು ನೋಡಿಕೊಳ್ಳೋಕೆ ದೊಡ್ಡಪ್ಪಂದಿರು ಮೂರು ಜನ ಇದ್ದಾರೆ. ಅವಳು ಬಂದಿರೋದು ನನ್ನ ಮೇಲಿನ ಪ್ರೀತಿಗೆ ತಿಳಿದುಕೊಳ್ಳಿ. ಅವರನ್ನ ನೀವು ಇಷ್ಟು ಹಗುರವಾಗಿ ಕಾಣುತ್ತೀರಿ ಅಂತ ತಿಳಿದಿದ್ದರೆ ಖಂಡಿತವಾಗಿ ಕರಕೊಂಡು ಬರುತ್ತಿರಲಿಲ್ಲ. ಈಗಲೂ ಅವಳು ಇಲ್ಲಿರೋದು ನಮಗಾಗಿ ಮಾತ್ರ...' ಸರಿ ...ಮತ್ತೆ ಮಾತಿಗೆ ಮಾತು, ವಾದ ವಿವಾದಗಳು. ಹೇಗೆ ಅಮ್ಮನಂತಹ ವ್ಯಕ್ತಿಯನ್ನ ಅಪ್ಪ ಇಷ್ಟು ವರುಷ ಸಹಿಸಿಕೊಂಡು ಬಾಳಿದರೋ ಅದು ನಿಜವಾಗಿ ಯಕ್ಷ ಪ್ರಶ್ನೆ. ಅತ್ತಿಗೆ ಅಜ್ಜಿಗೆ ಹೇಳಿದಳು: 'ಅತ್ತೆ... ನಡೀರಿ ನೀವು. ಇಲ್ಲಿರೋದು ಬೇಡ. ನಾನೇ ನಿಮ್ಮನ್ನ ಕರಕೊಂಡು ಹೋಗಿ ದೊಡ್ಡಪ್ಪನ ಮನೆಗೆ ಬಿಡ್ತೀನಿ. ಹೀಗೆಲ್ಲ ಅನ್ನಿಸಿಕೊಂಡು ಇರೋಕೆ ನಿಮಗೇನು ಬೇಕಾಗಿದೆ.' ಅವಳ ಕಣ್ಣಲ್ಲಿ ನೀರು ಹನಿಯುತ್ತಿತ್ತು. 'ನನಗೆ ಅಮ್ಮ ಇಲ್ಲ ಅಂತ ಬೆಳೆಸಿದಿರಿ. ನಿಜ. ಆದರೆ... ಅದಕ್ಕೆ ಅಂತ ನೀವು ಹೀಗೆಲ್ಲ ಅನ್ನಿಸಿಕೊಳ್ಳಬೇಕೆ?'

ಅಪ್ಪ ಹೇಳಿದರು, 'ಯಾಕೆ... ಇದೆಲ್ಲ ಸಾಕು. ಹೀಗಾಗಬಾರದಿತ್ತು ನಿಜ. ನೀನು ಮಾತನಾಡಬೇಡ' ಎಂದು ಅಮ್ಮನಿಗೆ ಹೇಳಿದರು. 'ಅವರನ್ನ ಒಳಗೆ ಕರಕೊಂಡು ಹೋಗಮ್ಮ'